# CMRITNSS TOOK INITIATIVE TO BEAUTIFY GOVT SCHOOLS

**Publication: Udayavahini**
**Date: 02-05-2022**

## ಹಾರನಹಳ್ಳಿ ಸರ್ಕಾರಿ ಶಾಲೆಯಲ್ಲಿ "ಸರ್ಕಾರಿ ಶಾಲೆಗಳ ನವೀಕರಣ ಸರ್ಕಾರಿ ಶಾಲೆ ಉಳಿಸೋಣ ಬನ್ನಿ" ಕಾರ್ಯಕ್ರಮ



ಉದಯವಾಹಿನಿ, ಬಾಣಾವಾರ: ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಸಂದರ್ಭದಲ್ಲಿ ಎಪ್ಪತ್ತೈದು ಸರ್ಕಾರಿ ಶಾಲೆಯ ನವೀಕರಣ ಮತ್ತು ಉಳಿಸೋಣ ಬನ್ನಿ ಸರ್ಕಾರಿ ಶಾಲೆ ಎಂಬ ಘೋಷವಾಕ್ಯದೊಂದಿಗೆ ಬೆಂಗಳೂರಿನ ಸ್ಕೂಲ್ ಬೆಲ್ ಕ್ಯಾಂಪಸ್ 2 ಕಮ್ಯುನಿಟಿ ಸಂಸ್ಥೆ.ಬೆಂಗಳೂರಿನ ಚಿಕ್ಕ ಮುನಿಯಪ್ಪ ರೆಡ್ಡಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಹಾಸನ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಶಾಲಾ ಶಿಕ್ಷಣಕ್ಕೆ ಪೂರಕವಾಗಿ ಗೋಡೆ ಮೇಲೆ ಸುಂದರ ವಾದ ಚಿತ್ರಗಳನ್ನು ಬಿಡಿಸುವ ಕಾರ್ಯಕ್ರಮವನ್ನು ಹಾರನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. 75ನೇ ಸ್ವಾತಂತ್ರ್ಯದ ವರ್ಷಾಚರಣೆಯ ಪ್ರಯುಕ್ತ ರಾಜ್ಯಾದ್ಯಂತ ಮೂವತ್ತು ಜಿಲ್ಲೆಗಳಲ್ಲಿ ಎಪ್ಪತ್ತೈದು ಸರ್ಕಾರಿ ಶಾಲೆಯ ನವೀಕರಣ ಮತ್ತು ಉಳಿಸೋಣ ಬನ್ನಿ ಸರ್ಕಾರಿ ಶಾಲೆ ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ-ಯೆಂದು ಚಿನ್ನಪ್ಪರೆಡ್ಡಿ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕ್ರೀಡಾ ನಿರ್ದೇಶಕ ಶೋಭಿತ್ ಭಾರದ್ವಾಜ್‌ರವರು ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ತಿಳಿಸಿದರು. ಅರಸೀಕೆರೆ ತಾಲ್ಲೂಕಿನಲ್ಲಿ ಈ ಕಾರ್ಯಕ್ರಮದಡಿಯಲ್ಲಿ ಹಾರನಹಳ್ಳಿ, ಡಿಎಂಕುರ್ಕೆ ಮತ್ತು ತೊಂಡಿಗನಹಳ್ಳಿ ಗ್ರಾಮಗಳಲ್ಲಿ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಾರನಹಳ್ಳಿ ರಾಮಸ್ವಾಮಿಯವರು ಸ್ವಾತಂತ್ರ ಹೋರಾಟಗಾರರಾಗಿದ್ದರಿಂದ ಹಾರನಹಳ್ಳಿ ಶಾಲೆಯನ್ನು ಅವರ ಗೌರವಾರ್ಥ ಆಯ್ಕೆ ಮಾಡಿಕೊಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಬಿಇಒ ಮೋಹನ್ ಕುಮಾರ್, ಸ್ಕೂಲ್‌ಬೆಲ್ ಕ್ಯಾಂಪಸ್ 2 ಕಮ್ಯುನಿಟಿ ಸಂಸ್ಥೆಯ ಗುರುಪ್ರಸಾದ್, ಎಸ್‌ಡಿಎಂಸಿ ಅಧ್ಯಕ್ಷ ಆಶೋಕ್, ಗ್ರಾಮ ಪಂಚಾಯಿತಿ ಸದಸ್ಯರಾದ ಸೂಫಿಯಾನ ಪಾಷ ,ನಾಗರಾಜು, ಶಾಲಾ ಮುಖ್ಯ ಶಿಕ್ಷಕ ಸೋಮಶೇಖರ್, ಶಾಲಾ ಶಿಕ್ಷಕರು, ಸಿಬ್ಬಂದಿ ವರ್ಗದವರು ಹಾಗೂ ಎನ್ ಎಸ್ ಎಸ್ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.